ಅಸಲು ದಾವೆ ನಂ.97/2022

ಪಿ.ಡಬ್ಲೂಃ 2- ಕೃಷ್ಣಾರೆಡ್ಡಿ ಆರ್. ಜಿ. ಬಿನ್ ಗೋವಿಂದ ರೆಡ್ಡಿ

ದಿನಾಂಕಃ 03/03/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 7 ಮತ್ತು 8 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್.ಕೆ.ಆರ್. ವಕೀಲರಿಂದ**

1. ವಾದಿಯರು ಈ ದಾವೆಯನ್ನು ಯಾವ ದಿನಾಂಕದಂದು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 2 ನೇ ವಾದಿಯು ನನ್ನ ತಾಯಿ ಮತ್ತು 1 ನೇ ವಾದಿಯು ನನ್ನ ದೊಡ್ಡಮ್ಮ. ವಾದಿಯರು ದಾವಾ ಸ್ವತ್ತುಗಳಲ್ಲಿ ಪಾಲು ಕೇಳಿ ಈ ದಾವೆ ದಾಖಲಿಸಿರುತ್ತಾರೆ. ಅವರು ಬೇರೆ ಏನು ಪರಿಹಾರ ಕೇಳಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಅವರು ಈ ದಾವೆಯನ್ನು 9 ಜನರ ವಿರುದ್ದ ದಾಖಲಿಸಿರುತ್ತಾರೆ. ದಾವೆಯನ್ನು 4 ಸ್ವತ್ತುಗಳ ಮೇಲೆ ದಾಖಲಿಸಿರುತ್ತಾರೆ. ಅವುಗಳ ಸರ್ವೆ ನಂ.6/1 ವಿಸ್ತೀರ್ಣ 2 ಎಕರೆ 9 ಗುಂಟೆ, ಸರ್ವೆ ನಂ.27/3 ವಿಸ್ತೀರ್ಣ 1 ಎಕರೆ, ಖಾತೆ ಸಂಖ್ಯೆ 15 ಮತ್ತು ಸರ್ವೆ ನಂ.6/2 ವಿಸ್ತೀರ್ಣ 3 ಗುಂಟೆ ಇರುತ್ತದೆ. ದಾವಾ ಸ್ವತ್ತುಗಳು ಮೂಲತಃ ಗಂಗುಲ ರೆಡ್ಡಿ ಮತ್ತು ಮುನಿಯಮ್ಮ ರವರಿಗೆ ಸೇರಿದ್ದವು. ಗಂಗುಲ ರೆಡ್ಡಿ ಮತ್ತು ಮುನಿಯಮ್ಮ ರವರಿಗೆ ದಾವಾ ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಿದ್ದವು. ನನಗೆ ಗಂಗುಲ ರೆಡ್ಡಿರವರ ತಂದೆಯ ಹೆಸರು ಗೊತ್ತಿರುವುದಿಲ್ಲ.

2. ವಾದಿಯರು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ತಿಳಿದುಕೊಂಡಿರುತ್ತೇನೆ. ವಾದಿಯರ ಮದುವೆಗಳನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಸದರಿ ಮದುವೆಗಳಿಗೆ ಎಷ್ಟು ಹಣ ಖರ್ಚು ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯರ ಮದುವೆಯ ಸಮಯದಲ್ಲಿ ಅವರ ತಂದೆಯಾದ ವೆಂಕಟರೆಡ್ಡಿ ಜೀವಂತ ಇರಲಿಲ್ಲ ಆದರೆ ಅವರ ತಾಯಿ ಇದ್ದರು.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್